**OS No. 100/2021**
**ಪಿ. ಡಬ್ಲ್ಯೂ: 1**

**ದಿನಾಂಕ 03.08.2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ವಾದಿ ಪರ : ಶ್ರೀ.ಪಿ.ಎಸ್ ವಕೀಲರಿಂದಃ**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ರೂಪದಲ್ಲಿ ಸಲ್ಲಿಸುತ್ತಿದ್ದು ಅದನ್ನು ನನ್ನ ಮಾಹಿತಿ ಮೇರೆಗೆ ನನ್ನ ವಕೀಲರು ತಯಾರಿಸಿರುತ್ತಾರೆ. ಅದರಲ್ಲಿ ಬರೆದಿರುವ ಸಂಗತಿಗಳು ನಿಜ ಇರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದಾಗಿರುತ್ತದೆ. ನಾನು ದಾವೆಯ ಜೊತೆಗೆ ಕೆಲವೊಂದು ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ.

ದಿನಾಂಕ 23.03.1982 ರ ದಾನಪತ್ರದ ದೃಡೀಕೃತ ನಕಲನ್ನು ನಿಪಿ-1 ಎಂದು ಗುರುತಿಸಲಾಯಿತು. ದಿನಾಂಕ 07.02.1981 ರ ವಾದಿಯರು ರಾಮಸಮುದ್ರ ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ ನೀಡಿದ ಅರ್ಜಿ ನಿಪಿ-2 ಎಂದು ಗುರುತಿಸಲಾಯಿತು. ದಿನಾಂಕ 01.04.1980 ರಿಂದ 26.02.2021 ವರೆಗೆ ಋಣಭಾರ ರಹಿತ್ಯ ಪ್ರಮಾಣ ಪತ್ರದ ಎರಡು ಪ್ರತಿಗಳನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು. ಸನ್ 1978-79 ರಿಂದ 2003-04 ರವರಗೆ ರಾಮಸಮುದ್ರ ಗ್ರಾಮಕ್ಕೆ ಸೇರಿದ ಜಮೀನು ಸರ್ವೆ ನಂ.257/1/ಇ ನೇದ್ದರ ಪಹಣಿಗಳನ್ನು ನಿಪಿ-5 ರಿಂದ ನಿಪಿ-9 ಎಂದು ಗುರುತಿಸಲಾಯಿತು. ದಿನಾಂಕ 05.08.2021 ರ ಕರ್ನಾಟಕ ಸಂದ್ಯಾ ಕಾಲ ದಿನ ಪತ್ರಿಕೆಯಲ್ಲಿ ಹೊರಡಿಸಿದ ನೋಟೀಸ ಇರುವುದರಿಂದ ಸದರಿ ದಿನಪತ್ರಿಕೆಯನ್ನು ನಿಪಿ-10 ಎಂದು ಗುರುತಿಸಲಾಯಿತು. ವಾದಿಯರು ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ ನೀಡಿದ ಎರಡು ಅರ್ಜಿಗಳನ್ನು ನಿಪಿ-11 ಮತ್ತು 12 ಎಂದು ಗುರುತಿಸಲಾಯಿತು. ಗ್ರಾಮ ಪಂಚಾಯತಿ ರಾಮಸಮುದ್ರ ಇವರು ದಿನಾಂಕ 17.09.1979 ರಂದು ಮಾಡಿದ ನಡುವಳಿಯನ್ನು ನಿಪಿ-13 ಎಂದು ಗುರುತಿಸಲಾಯಿತು. ದಿನಾಂಕ 18.09.1979 ರಂದು ಗ್ರಾಮ ಪಂಚಾಯತಿ ರಾಮಸಮುದ್ರ ಅಧ್ಯಕ್ಷರು ನೀಡಿದ ಅರ್ಜಿಯನ್ನು ನಿಪಿ-14 ಎಂದು ಗುರುತಿಸಲಾಯಿತು. ದಿನಾಂಕ 25.10.1979 ರಂದು ಗ್ರಾಮ ಪಂಚಾಯತಿ ರಾಮಸಮುದ್ರ ಅಧ್ಯಕ್ಷರು ನೀಡಿದ ಪತ್ರ ನಿಪಿ-15 ಎಂದು ಗುರುತಿಸಲಾಯಿತು. ಜಾಗದ ನಕಾಶೆ ನಿಪಿ-16 ಎಂದು ಗುರುತಿಸಲಾಯಿತು. ದಿನಾಂಕ 25.07.1980 ರಂದು ಗ್ರಾಮ ಪಂಚಾಯತಿ ರಾಮಸಮುದ್ರ ಅಧ್ಯಕ್ಷರಿಗೆ ನೀಡಿದ ಪತ್ರವನ್ನು ನಿಪಿ-17 ಎಂದು ಗುರುತಿಸಲಾಯಿತು. ದಿನಾಂಕ 03.12.1980 ರಂದು ಕರ್ನಾಟಕ ಸರಕಾರ ಇವರು ಮಾಡಿದ ಆದೇಶವನ್ನು ನಿಪಿ-18 ಎಂದು ಗುರುತಿಸಲಾಯಿತು. ದಿನಾಂಕ 09.08.1980 ರಂದು ಗ್ರಾಮ ಪಂಚಾಯತಿ ರಾಮಸಮುದ್ರ ಅಧ್ಯಕ್ಷರು ನೀಡಿದ ಪತ್ರ ನಿಪಿ-19 ಎಂದು ಗುರುತಿಸಲಾಯಿತು. ದಿನಾಂಕ 30.01.1981 ರಂದು ಗ್ರಾಮ ಪಂಚಾಯತಿ ರಾಮಸಮುದ್ರ ಅಧ್ಯಕ್ಷರಿಗೆ ನೀಡಿದ ಪತ್ರ ನಿಪಿ-20 ಎಂದು ಗುರುತಿಸಲಾಯಿತು. ಪ್ರತಿವಾದಿಯರಿಗೆ ನೀಡಿದ ಕಾನೂನು ತಿಳುವಳಿಕೆ ನೋಟಿಸಿನ ಕಚೇರಿ ಪ್ರತಿಯನ್ನು ನಿಪಿ-21 ಮತ್ತು ಅಂಚೆ ರಸೀದಿ ಮತ್ತು ಹಿಂಬರಗಳನ್ನು ನಿಪಿ-22 ರಿಂದ ನಿಪಿ-27 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ನೀಡಲಾಯಿತು.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು**
**ಯಾದಗಿರಿ**